# ಬೆಳ್ಳಿಯ ಗೂಡು ಜುಮುಕಿ

ಜುಮುಕಿ ಅನಾದಿ ಕಾಲದಿಂದಲೂ ಫ್ಯಾಷನ್ ಪ್ರಪಂಚದಲ್ಲಿ ರಾಣಿಯಂತೆ ಮೆರೆಯುತ್ತಿದೆ. ಇದರಲ್ಲಿ ಹೊಸ ಹೊಸ ವಿನ್ಯಾಸದವು ಬಂದಿದ್ದು, ಬೆಳ್ಳಿಯಲ್ಲಿ ಸಿದ್ಧಪಡಿಸಿದ ಗೂಡು ಜುಮುಕಿ ಈಗಿನ ಟ್ರೆಂಡ್!

■ ಕೃಷ್ಣವೇಣಿ ಪ್ರಸಾದ್ ಮುಳಿಯ

ಜುಮುಕಿ ಅನಾದಿ ಕಾಲದಿಂದಲೂ ಟ್ರೆಂಡಿಂಗ್‌ನಲ್ಲಿರುವ ಒಡವೆ. ಸಣ್ಣ ಮಕ್ಕಳಿಂದ ಹಿಡಿದು ಎಲ್ಲರೂ ಜುಮುಕಿಯನ್ನು ಎಲ್ಲರೂ ಇಷ್ಟಪಡುತ್ತಾರೆ. ಜುಮುಕಿಗಳಲ್ಲಿ ಬಹಳ ಹೊಸ ಹೊಸ ವಿನ್ಯಾಸಗಳು ಬರುತ್ತಿವೆ. ಜೊತೆಗೆ ಅದಕ್ಕೆ ಅಳವಡಿಸುವ ಹರಳುಗಳ ವಿನ್ಯಾಸದಲ್ಲೂ ಹಲವಾರು ವಿಧ ಇದೆ. ಪದರು ಪದರು (ಒಂದರ ಕೆಳಗೆ ಒಂದು) ಜುಮುಕಿ, ಡೈಪೀಸ್ ಅಳವಡಿಸಿದ ಜುಮುಕಿ, ಅಗಲದ ಕೊಡೆಯ ಹಾಗಿರುವ ಜುಮುಕಿ, ಚಿಕ್ಕ ಜುಮುಕಿ, ಸ್ಕ್ವೇರ್ ಜುಮುಕಿ, ಅರ್ಧ ಭಾಗ ಜುಮುಕಿ ಎದುರು ಭಾಗದಿಂದ ಕಾಣುವಂತೆ ಹೀಗೆ ಜುಮುಕಿಗಳಲ್ಲಿ ಅತೀ ಸುಂದರ ವಿನ್ಯಾಸಗಳು ಬಂದಿದೆ. ಇವುಗಳಲ್ಲಿ ಮುಖ್ಯವಾದವು ಬೆಳ್ಳಿಯ ಉದ್ದದ ಜುಮುಕಿ, ಅಗಲ ಕೊಡೆಯ ಜುಮುಕಿ, ಚೌಕ/ತ್ರಿಕೋನ ವಿನ್ಯಾಸದ ಜುಮುಕಿ... ಇತ್ಯಾದಿ.



ಮಲ್ಟಿ ಕಲರ್ ಪಚ್ಚೆ, ರೂಬಿ ಜುಮುಕಿ: ಬೆಳ್ಳಿ ಜುಮುಕಿಗಳಲ್ಲಿ ಸೆಮಿ ಪ್ರೆಷಿಯಸ್ ಪಚ್ಚೆ, ರೂಬಿ ಅಳವಡಿಸಿರುತ್ತಾರೆ. ಏಕೆಂದರೆ ಮನೆಯಲ್ಲೇ ಇಟ್ಟುಕೊಂಡು ಬೇಕಾದ ಹಾಗೆ ಸುಲಭವಾಗಿ ಬಳಸಬಹುದು. ಈ ಪಚ್ಚೆ, ರೂಬಿ ಹರಳು ಗಾಢ ಬಣ್ಣ ಹೊಂದಿದ್ದು ಬೆಳ್ಳಿ ಜುಮುಕಿ ಮೇಲೆ ಎದ್ದು ಕಾಣುತ್ತದೆ. ಇದರ ಬಾಳಿಕೆಯೂ ದೀರ್ಘ. ಇದು 8 ಗ್ರಾಂ ಹೊಂದಿದ್ದು ರಿಂಗ್‌ಗಳು ಬೆಸೆದಂತೆ ಮಾಡಿದಾಗ ಹಿತವಾಗಿರುತ್ತದೆ.

ಫೈವನ್ ಕೋರಲ್ ಜುಮುಕಿ: ಇದೊಂದು ವಿಶೇಷ ತರದ ಜುಮುಕಿಯಾಗಿದ್ದು, ನೋಟದಲ್ಲಿ ಹವಳದಂತೆ ಇದ್ದು, ತುಂಬ ಭಾರವೂ ಇರುವುದಿಲ್ಲ. ಹೊಸತು ಬೇಕು, ಚಿಕ್ಕ ಮಣಿಗಳಾಗಿರಬೇಕು, ಬಣ್ಣ ಗಾಢವಾಗಿರಬೇಕು ಎನ್ನುವವರಿಗೆ ಇದು ಸೂಕ್ತ. ಜೊತೆಗೆ ಶಾಲಾ ಕಾಲೇಜುಗಳಿಗೆ ಹೋಗುವ ಹುಡುಗಿಯರಿಗೆ ಇದು ತುಂಬ ಚೆನ್ನಾಗಿರುತ್ತದೆ. ಅಲ್ಲದೆ ಸೀರೆ ಅಥವಾ ಡ್ರೆಸ್ ತೊಟ್ಟಾಗಲೂ ಬೆಳ್ಳಿ ಜರಿ ಅಥವಾ ಸಿಲ್ವರ್ ಡಿಸೈನ್ ಟ್ರೆಂಡ್ ಆಗಿರುವ ಕಾರಣ ಬೆಳ್ಳಿ ಜುಮುಕಿ ಬಹಳ ಚೆನ್ನಾಗಿ ಕಾಣುತ್ತದೆ. ಇದಕ್ಕೆ ಬೆಳ್ಳಿಯ ವೃತ್ತಾಕಾರದ ತಿರುಗಣೆ ಇರುವ ಓಲೆ ಧರಿಸಬಹುದು. ಕೊಂಡಿ ಅಳವಡಿಸಿ ಕಿವಿಯ ತೂತಿಗೆ ಸಿಲುಕಿಸುವಂತೆಯೂ ಧರಿಸಬಹುದು.



ಬೆಳ್ಳಿಯ ಸಿಂಪಲ್ ಜುಮುಕಿ: ಕೆಲವರಿಗೆ ಜುಮುಕಿಯಲ್ಲಿ ಯಾವುದೇ ಹರಳು, ಬಣ್ಣ ಬಣ್ಣ ಅಳವಡಿಸುವುದು ಇಷ್ಟ ಇರುವುದಿಲ್ಲ. ಸಿಂಪಲ್ ಆಗಿ ಇರಬೇಕು ಎಂಬ ಆಸೆ ಇರುತ್ತದೆ. ಅಂಥವರಿಗಾಗಿಯೇ ಸಿಂಪಲ್ ಜುಮುಕಿ ಸೂಕ್ತ. ಈ ಆಭರಣದಲ್ಲಿ ಬೆಳ್ಳಿಯಲ್ಲೇ ತಯಾರಿಸಿದ ಮಣಿಗಳನ್ನು ಅಳವಡಿಸಿ ಹಾಕಿಕೊಳ್ಳಬಹುದು. ಬಿಳಿ/ಕ್ರೀಮ್ ಮುತ್ತುಗಳನ್ನೂ ಹಾಕಬಹುದು. ಅದು ಬೆಳ್ಳಿಗೆ ಹೊಂದಿಕೊಳ್ಳುತ್ತದೆ. ಯಸ್ ಹುಕ್‌ನಲ್ಲಿ ಸ್ಪ್ರಿಂಗನ್ನು ಅಳವಡಿಸಿದಂತೆ ಬೆಳ್ಳಿಯ ತಂತಿಯನ್ನು ಸುತ್ತಿಸಿದಾಗ ಅದಕ್ಕೆ ಒಂದು ರೂಪ ಬರುತ್ತದೆ. ಇದು ಸ್ಟೂಡೆಂಟ್ ವೇರ್, ಎಥ್ನಿಕ್ ವೇರ್ ಆಗಿದ್ದು ಹಬ್ಬಗಳು, ಶಾಲಾ ಕಾಲೇಜುಗಳಲ್ಲಿ ಕಾರ್ಯಕ್ರಮ ಇದ್ದಾಗ ಇದನ್ನು ಧರಿಸಬಹುದು.

ಕಪ್ಪು ಮಣಿ ಜಾಲರಿಯ ಬೆಳ್ಳಿ ಜುಮುಕಿ: ಸಾಧಾರಣವಾಗಿ ಬೆಳ್ಳಿಯ ಹೊಳಪು ಸೌಂದರ್ಯವನ್ನು ಹೆಚ್ಚಿಸುತ್ತದೆ. ನಮ್ಮ ಲುಕ್ ಅನ್ನು ಇಮ್ಮಡಿಗೊಳಿಸುತ್ತದೆ. ಬೆಳ್ಳಿಯ ಜೊತೆ ಹರಳು, ಮಣಿಗಳು ಸೇರಿದಾಗ ಅದಕ್ಕೆ ಮೆರುಗು ಹೆಚ್ಚುತ್ತದೆ. ಅದನ್ನು ಕಾಟನ್ ಸೀರೆ, ಗಾಢ ಬಣ್ಣದ ಸೀರೆಗಳನ್ನು ಉಟ್ಟು ನಾರಿ ಧರಿಸಿದಾಗ ನೋಟವೇ ಹೊಸತನದಿಂದ ಕೂಡಿರುತ್ತದೆ. ಕಪ್ಪು ಮಣಿ ಜೊತೆಗೂಡಿದ ಜುಮುಕಿ ಮುಖದ ಅಂದ ಹೆಚ್ಚಿಸುತ್ತದೆ. ಹೆಣ್ಣು ಮಕ್ಕಳಿಗೆ ಕಪ್ಪು ಮಣಿ ಈಗಿನ ಟ್ರೆಂಡ್. ಅದಕ್ಕೆ ಅಷ್ಟು ಮಹತ್ವ.

ಜುಮುಕಿಯಲ್ಲಿ ಸ್ಟೆಪ್ ಸ್ಟೆಪ್ ಇರುವುದು ಬಹಳ ಚಂದ. ಕೇವಲ ಜಾಲರಿಗಳನ್ನು ಹೀಗೆ ಎರಡು ಮೂರು ಸ್ಟೆಪ್‌ನಲ್ಲಿ ವಿನ್ಯಾಸಗೊಳಿಸಿ ಧರಿಸಬಹುದು. ಅದು ಸೊಗಸಾಗಿರುತ್ತದೆ. ಕಪ್ಪು ಬಣ್ಣದ ಚಪ್ಪಲಿ, ಕಪ್ಪು ಮಣಿ, ಹರಳು ಹೊಂದಿದ ಬಳೆ, ಕಪ್ಪು ಬಣ್ಣದ ಹೇರ್ ಕ್ಲಿಪ್, ಬ್ಯಾಂಡ್‌ಗಳನ್ನು ಬಳಸಿ ಕಪ್ಪು ಅಂಚಿನ ಸೀರೆ ಅಥವಾ ಕಪ್ಪು ಬಣ್ಣಕ್ಕೆ ಹೊಂದಿಕೆಯಾಗುವ ಇನ್ನೊಂದು ಬಣ್ಣ ಇರುವ ಚೂಡಿದಾರ್, ಲೆಹೆಂಗಾಕ್ಕೂ ಕೂಡ ಈ ಬೆಳ್ಳಿ ಆಭರಣ ಹೊಂದುತ್ತದೆ. ಬೂದು ಬಣ್ಣದ ದಿರಿಸಿಗೂ ತುಂಬಾ ಹೊಂದುತ್ತದೆ. ಬೇಬಿ ಪಿಂಕ್, ಕೆಂಪಿಗೂ ಹಾಲು ಸಕ್ಕರೆಯಂತೆ ಬೆರೆತು ಹೋಗುತ್ತದೆ. ಥ್ರೆಡ್‌ನೊಂದಿಗೆ ಹಣೆದ ಬೆಳ್ಳಿ ಆಭರಣ ಕೂಡ ಸುಂದರವಾಗಿರುತ್ತದೆ. ■